ರೋಟಿಗಳನ್ನು ಹಂಚುತ್ತಿದ್ದಳು. ಅವನು ಸ್ವಲ್ಪ ಸನಿಹಕ್ಕೆ ಹೋಗುತ್ತಿರುವಾಗ ಅವನಿಗೆ ಅವಳು ಗುನುಗುತ್ತಿರುವುದು ಕೇಳಿಸಿತು... ಜನಪದ ಹಾಡು – 'ಲಕ್ ಚಿಪ್ ನ ಜಾವ್ಹೋಜಿ, ಮನ್ನೆ ಡೀಡ್ ಕರಾವ್ಹೋ ಜಿ| ರೇ ಕೋ ತರಸಾವೇ ಹೋ... ಮನ್ನೆ ಸಕಲ್ ದಿಖಾವ್ಹೋ ಜೀ|' ಗುನುಗುತ್ತಾ ಇರುವ ಅವಳ ಮುಖದ ಮೇಲೆ ಅವಳ ಓಡ್ನಿಯ ಕನ್ನಡಿ ಪ್ರತಿಫಲಿಸುತ್ತಿತ್ತು. ಬಹಳ ಸುಂದರವಾದ ಹಾಡು. ಇವನನ್ನು ನೋಡುತ್ತಲೇ ಓಡ್ನಿಯನ್ನು ಮತ್ತಷ್ಟು ಮುಖದ ಮೇಲೆ ಎಳೆದುಕೊಂಡು, ಒಂದು ಎಲೆಯ ಮೇಲೆ ಬಾಜ್ರ ರೋಟಿ, ಬದನೆಕಾಯಿ ಪಲ್ಯ ಮತ್ತು ಈರುಳ್ಳಿ ಜೊತೆಗೆ ಎರಡು ಹಸಿ ಮೆಣಸಿನಕಾಯಿ ಇಟ್ಟು ಕೊಟ್ಟಳು.

'ಅವನು ತಿಂದು ಬಿಟ್ನಾ... ಥಾಂಕ್ಸ್ ಹೇಳದೇ... ಮತ್ತೆ... ಅವನ್ಯಾರು? ಅದನ್ನೇ ಹೇಳಿಲ್ಲ ನೀನು...' ಅಂಕಿತ್ ಸುಮತಿಯ ಕತೆಗೆ ತಡೆ ತಂದ. ಅವನಾಗಲೇ ಅವಳ ಮಡಿಲಲ್ಲಿ ತಲೆಯಿಟ್ಟು ಮಲಗಿ ಕೇಳತೊಡಗಿದ್ದ. ಅವನ ಕೂದಲಲ್ಲಿ ಬೆರಳಾಡಿಸುತ್ತ ಸುಮತಿ ಹೇಳಿದಳು... 'ಮಧ್ಯೆ ಮಾತನಾಡಬಾರದು. ಗೊತ್ತಾಯ್ತು?... ಸುಮ್ನೆ ಕೇಳಬೇಕು...'

ಅವತ್ತು ಅವನು ಮಾಡಿದ ಊಟ ಅವನೆಂದೂ ಮರೆಯುವಂತಿರಲಿಲ್ಲ. ಅಷ್ಟು ರುಚಿಯಾಗಿತ್ತು. ಎಲ್ಲರೂ ಮನೆಗೆ ಹೊರಡುವ ವೇಳೆಗೆ ಬಿಂದಿಗೆಯಲ್ಲಿ ನೀರು ತುಂಬಿಸಿಕೊಳ್ಳಲು ಬಂದ ಅಂಜುವನ್ನು ಕೇಳಿದ 'ನಿನ್ನ ಹೆಸರೇನು? (ಚೋಕ್ರಿ... ತಾರಾ ನಾಮ್?)' ಅವನ ಧ್ವನಿಯಲ್ಲಿ ಒಂಥರಾ ತುಂಟಾಟವಿದ್ದಂತೆ... ಮುಖದಲ್ಲಿ ಮುಗುಳು ನಗೆ. ಅವಳು ನಾಚುತ್ತಾ... 'ಅಂಜು... ಅಂಜು ಬಾಂಜುರಿ...' ಮೆಲುವಾಗಿ ನುಡಿದಳು. ಬಿಂದಿಗೆಯನ್ನು ತಲೆಯ ಮೇಲಿಟ್ಟು ಹೊರಡುವ ಮುನ್ನ ಅವನು ಕೇಳಿದ 'ಮಾರಾ ನಾಂ ಪೂಚೋಗೇ ನೈ?... (ನನ್ನ ಹೆಸರು ಕೇಳಲ್ವ?)' ಅವಳು ಸುಮ್ಮನೆ ನಿಂತಳು. 'ಹಂ ಹೈ ಜಯ್ ಪುರ್ ಕ ರಾಜ್ ಕುವರ್... ಅಭಿಮನ್ಯು ಸಿಂಗ್ ರಾಥೋರ್...' ಮೀಸೆ ತಿರುವಿದ. ಒಂದು ಕ್ಷಣ ಅವಳ ಕಾಲು ತಟಸ್ಥವಾಯಿತು. ಓಡ್ನಿ ಸರಿಸಿ ಅವನ ಮುಖವನ್ನೇ ನೋಡಿದಳು. 'ತಪ್ಪಾಯ್ತು ಒಡೆಯ... ಕ್ಷಮಿಸಿ...' ಎಂದವಳೇ ಅಲ್ಲಿಂದ ಬಿರ ಬಿರನೆ ನಡೆದುಬಿಟ್ಟಳು.

ಆದರೆ, ಅರಮನೆಗೆ ಹಿಂತಿರುಗಿದ ಅಭಿಮನ್ಯುವಿಗೆ ಅವಳದೇ ಚಿಂತೆ. ಅವಳ ಮುಗ್ಧ ನೋಟ, ಮುಖ ಸೌಂದರ್ಯ, ನಡಿಗೆಯ ನಾಟ್ಯ, ಊಟ ನೀಡಿದ ಕೈ ಬೆರಳುಗಳು... ಎಲ್ಲದಕ್ಕಿಂತ ಹಾಡು... ಅವಳು ಗುನುಗಿದ ಹಾಡು. ಪ್ರಸಿದ್ಧವಾದ ಹಾಡು... ಅವನೂ ಗುನುಗಿದ... 'ರೇ... ಚಂದಾ ಮೇ... ತಾರೀ... ರೇ ಚಾಂದ್ ನೀ... ಲಕ್ ಚಿಪ್ ನ ಜಾವ್ಹೋಜಿ...' ಮುಗುಳ್ನಕ್ಕ... 'ನನ್ನನ್ನು ನೀನು ಕಾಯಿಸಬೇಡ. ನನ್ನ ಪ್ರೇಮದ ಹೆಣಿಗೆಯ ತುಂಬ ನಿನ್ನದೇ ಕುಸುರಿ ಕೆಲಸ... ಅಲ್ಲಿ ಚಂದ್ರ, ತಾರೆ ಎಲ್ಲವೂ ನೀನೆ, ಬೆಳದಿಂಗಳೂ ನೀನೆ...' ಮತ್ತೆ ಮತ್ತೆ ನಕ್ಕ. ಅವಳ ಮುಖದ ತುಂಬ ಹರಡುತ್ತಿದ್ದ ಕನ್ನಡಿಯ ಬಣ್ಣ ಬಣ್ಣದ ಬೆಳಕನ್ನು ನೆನೆದ. ಮತ್ತೆ ಮರುದಿನ ಸ್ವಲ್ಪ ಬೇಗನೇ ಕುದುರೆಯಲ್ಲಿ ಹೊರಟ. ಅದೇ ಕೊಳದ ಬಳಿ ಕಾಯುತ್ತ ಕುಳಿತ. ಅಂಜು ಬಂದಳು. ಆದರೆ ಈ ಸಲ ಅವಳೊಬ್ಬಳೇ... ಅವನಿಗೆಂದು ಮಡಿಕೆಯಲ್ಲಿ ಒಂಟೆ ಹಾಲು ತಂದಿದ್ದಳು. ಅದನ್ನು ಕುಡಿಯುತ್ತಾ ನಕ್ಕ ಮೀಸೆಯಡಿಯಲ್ಲಿ. ಅವಳು ನೀರಿನಲ್ಲಿ ಆಡುತ್ತಾ ಕುಳಿತಳು. ಎಷ್ಟೋ ಹೊತ್ತು ಕಳೆದ ನಂತರ ಕರೆದ 'ಅಂಜು ಬಾಂಜುರಿ... ನಿನ್ನನ್ನು ಅಂಜು ಎನ್ನಲೇ?' ನಕ್ಕು ತಲೆಯಾಡಿಸಿದಳು. ಅವಳ ಹೆಸರನ್ನೇ ಮಧುರವಾಗಿ ಕರೆಯತೊಡಗಿದ... 'ಅಂಜು, ಅಂಜು... ಮಾರಾ ಅಂಜು...' ಅವಳು ಥಟ್ಟನೆ ತಲೆಯೆತ್ತಿ ನೋಡಿದಳು. 'ಹಾಂ... ಮಾರಾ ಅಂಜು... ತಪ್ಪಾ?...' ಕೇಳಿದ. 'ನನ್ನ ಅಂಜು ಆಗುವೆಯಾ?...' ವಯಸ್ಸಲ್ಲವೇ... ಸಮ್ಮತಿಸಿದಳು. ಅದು ಅಂತಸ್ತನ್ನಾಗಲಿ, ಜವಾಬ್ದಾರಿಗಳನ್ನಾಗಲೀ ಯೋಚಿಸುವ ವಯಸ್ಸು ಆಗಿರಲಿಲ್ಲ. ಕೇವಲ ಪುರುಷನೊಬ್ಬ ತನ್ನ ಹೆಸರನ್ನು ಇಂಪಾಗಿ ಕರೆದದ್ದರ ಆಕರ್ಷಣೆ ಆಗಿತ್ತು ಅಷ್ಟೆ. ಅವನಿಗಾದರೂ ಅಷ್ಟೆ. ಅಂತಃಪುರದ ರೀತಿ ರಿವಾಜುಗಳಲ್ಲೇ, ಆ ಬಿಗಿಯನ್ನು ಕಾಯ್ದುಕೊಳ್ಳುತ್ತಲೇ, ಅದರ ಮರ್ಯಾದೆಯನ್ನು ಹೆಜ್ಜೆ